## ಕಳೆದ ಸಂಚಿಕೆಯಲ್ಲಿ



ಪ್ರವಾಹದ ನಂತರದ ಪರಿಹಾರ ಕಾರ್ಯಕ್ರಮಗಳು ಮನುಷ್ಯಲೋಕದ ಹಲವು ಮುಖಗಳನ್ನು ಕ್ರಾಂತಿ ರೆಡ್ಡಿಗೆ ಕಾಣಿಸಿದವು. ಒಂದೆಡೆ, ಹಣ ಗಳಿಸಿದಷ್ಟೇ ಸಲೀಸಾಗಿ ಅದನ್ನು ದೀನರಿಗೆ ಹಂಚಲೂ ಬಲ್ಲ ಕೆ.ಎಮ್. ನಯ್ಯಾರ್ ಅವರಂಥ ಮಾದರಿ ಉದ್ಯಮಿ; ಇನ್ನೊಂದೆಡೆ ಸೂತಕದ ಸಂದರ್ಭದಲ್ಲೂ ಲಾಭ ಮಾಡಿಕೊಳ್ಳಲು ತಹತಹಿಸುವ ಮನಸ್ಸುಗಳು. ಈ ವೈರುಧ್ಯಗಳಲ್ಲಿ ಮುಳುಗಿರುವಾಗ ಎದುರಾದುದು ಅಚ್ಯುತನ್ ನಂಬಿಯಾರ್ ಹಾಗೂ ಕರುಣಾಕರನ್ ಮೊದಲಿಯಾರ್. ಭವಿಷ್ಯದ ಆಗುಹೋಗುಗಳನ್ನು ನಿಖರಾಗಿ ಹೇಳುತ್ತಿದ್ದ ನಂಬಿಯಾರ್ ವಿಸ್ಮಯ ಹುಟ್ಟಿಸಿದರೆ, ಆಭರಣ ವ್ಯಾಪಾರಿ ಮೊದಲಿಯಾರ್ ಕೌಟುಂಬಿಕ ಸಂಬಂಧಗಳ ಬಗ್ಗೆ ಆರ್ದ್ರವಾಗಿ ಮಾತನಾಡಿದ್ದು ತನ್ನ ಬದುಕನ್ನು ವಿಮರ್ಶಿಸಿಕೊಳ್ಳಲು ಕ್ರಾಂತಿ ರೆಡ್ಡಿಯನ್ನು ಒತ್ತಾಯಿಸುವಂತಿತ್ತು.

ಪಿಳ್ಳೈ ಇಬ್ಬರ ದೇಹಗಳೂ ಕಣ್ಣೆದುರಿಗೆ ಬಂದು ನಿಂತಿದ್ದವು. ಮದುವೆಯಾಗಿ ಐದು ವರ್ಷಗಳಲ್ಲಿ ನನ್ನ ಹೆಂಡತಿ ಆಶಾ ಬೆಂಗತಮಲೆಯೊಂದಿಗೆ ದೇಹ ಹಂಚಿಕೊಂಡಿದ್ದು ಕಡಿಮೆಯಾದರೂ ಲೆಕ್ಕ ಇಟ್ಟಿರಲಿಲ್ಲ. ಆದರೆ ಅವಳೊಂದಿಗೆ ಕೂಡಿದ ಪ್ರತಿಬಾರಿಯೂ ನನ್ನ ದೇಹ ತನ್ನ ಗರಿಷ್ಠ ಸುಖವನ್ನು ಪಡೆದಿದ್ದರ ಬಗ್ಗೆ ನನಗಂತೂ ಅರಿವಾಗಿರಲಿಲ್ಲ. ಅದರ ನೆನಪು ಸಹ ನನಗಿಲ್ಲ. ಆಶಾ ಬೆಂಗತಮಲೆ ನೋಡಲು ಸುಂದರವಾಗಿದ್ದರೂ, ಅದ್ಭುತ ಶಾರೀರಿಕ ಪರ್ಸನಾಲಿಟಿಯನ್ನು ಹೊಂದಿದ್ದರೂ ನನ್ನ ದೇಹ ಅದಕ್ಕೆ ತೀವ್ರತರವಾದ ಆಕರ್ಷಣೆಗೊಳ್ಳದೆ ಒಂದು ರೀತಿಯ ನಿರಾಕರಣೆಯನ್ನು ತುಂಬಿಕೊಂಡು ಒದ್ದಾಡುತ್ತಿತ್ತು. ಅಲ್ಲಿ ಅಗತ್ಯದ ಅನಿವಾರ್ಯತೆ ಇದ್ದಂತೆ ಮಾತ್ರ ಫೀಲಾಗುತ್ತಿತ್ತೇ ಹೊರತು ಒಂದು ರೀತಿಯ ಆತ್ಮೀಯ ಸಂಘರ್ಷ ಚಿಮ್ಮುವ ಸಂವೇದನಾಶೀಲ ಒಡಂಬಡಿಕೆಯ ಅನುಸಂಧಾನಕ್ಕೆ ಈಡಾಗಿರಲಿಲ್ಲ. ಭಿನ್ನ ಆಲೋಚನೆಗಳು, ಭಿನ್ನ ಅಭಿರುಚಿಗಳು, ಭಿನ್ನ ನಡವಳಿಕೆಗಳು, ಭಿನ್ನ ಅಭ್ಯಾಸಗಳು ದೇಹಗಳ ಆಕರ್ಷಣೆ ಮತ್ತು ಸುಖದ ವಿನ್ಯಾಸಗಳಿಗೆ ಕೆಡುಕನ್ನುಂಟುಮಾಡುತ್ತವೆ ಎಂಬ ಸತ್ಯ ಅರಿವಾದದ್ದೇ ಅರುಂಧತಿ ಪಿಳ್ಳೈಯೊಂದಿಗೆ ದೇಹ ಹಂಚಿಕೊಂಡು ಅಮಿತಾನಂದವನ್ನು ಅನುಭವಿಸಿದಾಗ. ನಾನು ಕೊಚ್ಚಿನ್ ವಿಮಾನ ನಿಲ್ದಾಣದಲ್ಲಿ ಇಳಿಯುವವರೆಗೂ ಅರುಂಧತಿಯ ಬಗ್ಗೆ ಯಾವುದೇ ರೀತಿಯ ಕಲ್ಪನೆ ಕೂಡಾ ಇರಲಿಲ್ಲ ಮತ್ತು ಅಂದು ರಾತ್ರಿ ಅರುಂಧತಿ ಪಿಳ್ಳೈ ನಾನು ಉಳಿದುಕೊಂಡಿದ್ದ ಗೆಸ್ಟ್ ಹೌಸ್‌ಗೆ ಬರುವವರೆಗೂ ಅವಳ ಬಗ್ಗೆ ಯಾವುದೇ ರೀತಿಯ ಭಾವನೆಗಳನ್ನೂ ನಾನು ಇಟ್ಟುಕೊಂಡಿರಲಿಲ್ಲ. ಆದರೂ ಆಕಸ್ಮಿಕವಾಗಿ ಗತಿಸಿದ ಆ ಘಟನೆ ನನ್ನಲ್ಲಿ ತೀವ್ರತರವಾದ ದೈಹಿಕ ತೃಪ್ತಿ ಮತ್ತು ಆಪ್ತವಾದ ಸಂವೇದನೆಗಳನ್ನು ಉಂಟುಮಾಡಿದ್ದಾದರೂ ಏಕಿರಬಹುದು? ಹೇಗಿರಬಹುದು?

ಈ ಯೋಚನೆಗಳಿಂದ ಹೊರಬರಲು ರಾಘವರೆಡ್ಡಿಗೆ ಫೋನ್ ಮಾಡಿದ್ದೆ. ದೀರ್ಘವಾದ ರಿಂಗಾಗಿದ್ದರೂ ಫೋನ್ ಲಿಫ್ಟ್ ಮಾಡಿರಲಿಲ್ಲ. ಬೇಗನೆ ಮಲಗಿರಬಹುದೆನಿಸಿ ಸುಮ್ಮನಾದೆ. ಐದು ನಿಮಿಷಗಳಲ್ಲಿ ರಾಘವರೆಡ್ಡಿ ತಾನೇ ಹಿಂತಿರುಗಿ ಫೋನ್ ಮಾಡಿದ್ದ. ‘ಹಲೋ, ಏನು ಆಗಲೇ ಮಲಗಿದಂಗಿದೆ’ ಎಂದು ಮಾತು ಪ್ರಾರಂಭಿಸಿದ್ದೆ. ‘ಇಲ್ಲ, ಈಗ ತಾನೇ ಊಟ ಮುಗಿಸಿದೆ. ಕೊಂಡಯ್ಯನ ಸಮಸ್ಯೆ ಬಗ್ಗೆ ಬೆಳಿಗ್ಗೆಯಿಂದಲೂ ನ್ಯಾಯ ಪಂಚಾಯ್ತಿ ಆಗಿ ಕೊನೆಗೂ ಒಂದು ಎಂಡ್ ಸಿಗಲೇ ಇಲ್ಲ. ಇಬ್ಬರು ಹೆಂಗಸರೂ ಒಬ್ಬರಿಗೊಬ್ಬರು ಜುಟ್ಟು ಹಿಡಿದು ಜಗ್ಗಾಡಿದ್ದರು. ಆಂಧ್ರ ಭವನದಲ್ಲಿ ಅದೊಂದು ದೊಡ್ಡ ನಗೆಪಾಟಲಿನ ಪ್ರಸಂಗ ಆಗೋಯ್ತು. ಹೆಂಗಸರಲ್ಲಿ ಪೊಸೆಸೀವ್‌ನೆಸ್ ಹುಟ್ಟಿಬಿಟ್ರೆ ಮುಗೀತು, ಯಮಧರ್ಮರಾಯನ ಜೊತೆಗಾದರೂ ಸೈ ಯುದ್ಧ ಮಾಡೋಕೆ ಸಿದ್ಧರಾಗಿಬಿಡ್ತಾರೆ. ಇರೋ ಆಸ್ತೀನ ಇಬ್ಬರಿಗೂ ಸಮನಾಗಿ ಹಂಚಿ ಹಿಮಾಲಯದ ಕಡೆ ಹೋಗಿಬಿಡ್ತೀನಿ, ಎಂಎಲ್‌ಎಗಿರೀನೂ ಬೇಡ ಅಸೆಂಬ್ಲೀನೂ ಬೇಡ ಅಂತ ಕೊಂಡಯ್ಯ ಕರೆಕ್ಟಾಗಿ ಮುಕ್ಕಾಲು ಬಾಟಲ್ ಓಲ್ಡ್ ಮಾಂಕ್ ರಮ್ ಕುಡಿದು ಒಂದೆರಡು ಚಮಚ ಬಿರಿಯಾನಿ ತಿಂದು ತಲೆ ಸುತ್ತಿಬಂದು ಹಾಸಿಗೆಯ ಮೇಲೆ ಬಿದ್ದಿದ್ದಾನೆ. ನನಗೆ ಮೂರು ದಿನಗಳಿಂದ ತಿಕದಲ್ಲಿ ಪಿಸ್ತೂಲಾ ಕಾಣಿಸಿಕೊಂಡು ತಡೆಯಲಾರದಷ್ಟು ನೋವು ಕೊಡುತ್ತಿದೆ. ಡಾಕ್ಟರ್‌ಗೆ ತೋರಿಸಿ ಅವರು ಕೊಟ್ಟ ಪೈನ್ ಕಿಲ್ಲರ್ ತೆಗೆದುಕೊಂಡರೂ ನೋವು ಕಡಿಮೆಯಾಗ್ತಾ ಇಲ್ಲ. ಮಲ ವಿಸರ್ಜನೆ ಮಾಡೋವಾಗ ಪ್ರಾಣ ಹೋದಂತೆ ಆಗ್ತದೆ. ಬೆಳಿಗ್ಗೆಯಿಂದ ಐದಾರು ಬಿಯರ್ ಕುಡಿದು ಬೇಯಿಸಿದ ಮೂಲಂಗಿಯನ್ನು ತಿಂದಿದ್ದೀನಿ’ ಎಂದ ರಾಘವರೆಡ್ಡಿ ಮಾತಿಗೆ, ಅಂಥದ್ದೇನೂ ಇರಲಿಲ್ಲವಲ್ಲ ನಿಮಗೆ. ವಿಪರೀತ ಓಡಾಟ ಮತ್ತು ಜಾಸ್ತಿ ನಾನ್ವೆಜ್ ತಿಂದರೆ ಪೈಲ್ಸ್ ಜೊತೆ ಪಿಸ್ತೂಲಾ ಕೂಡಾ ಬರ್ತದೆಂದು ಕೇಳಿದ್ದೀನಿ. ತುಂಬಾ ಇರಿಟೇಶನ್ ಇರ್ತದಂತೆ ಎಂದು ಕೇಳಿದ್ದೀನಿ. ಅದು ಕರುಳನ್ನು ಕ್ಲೀನಾಗಿ ಇಟ್ಟುಕೊಳ್ಳದಿದ್ದರೆ ಬರೋ ವ್ಯಾಧಿ. ನಮ್ಮ ಬೆಂಗಳೂರಿನಲ್ಲಿ ಅದಕ್ಕೆ ನಾಟಿ ಔಷಧಿ ಕೊಡೋರು ತುಂಬಾ ಇದಾರೆ. ಮುಂದಿನ ಸಾರಿ ಬೆಂಗಳೂರಿಗೆ ಬಂದಾಗ ತೋರಿಸೋಣವಂತೆ’ ಎಂದು ಸಮಾಧಾನ ಮಾಡಿದ್ದೆ.

‘ಇದು ಅಷ್ಟು ಬೇಗ ವಾಸಿಯಾಗೋ ಕಾಯಿಲೆಯಲ್ಲವಂತೆ ಮಾರಾಯಾ. ಹಿಂದಿನ ಜನ್ಮದಲ್ಲಿ ನಾವು ಮಾಡಿದ ಕರ್ಮಗಳ ಫಲವಾಗಿ ಇಂಥ ವ್ಯಾಧಿಗಳು ತಗುಲಿಕೊಳ್ತಾವಂತೆ. ನಾನೂ, ಕೊಂಡಯ್ಯ ಇವೊತ್ತು ಸಂಜೆ ಐದು ಗಂಟೆಗೆ ದಿಲ್ಲಿಯ ಫೇಮಸ್ ಅಸ್ಟ್ರಾಲಜರೊಬ್ಬರ ಹತ್ತಿರ ಹೋಗಿದ್ವಿ. ಹಿಂದಿನ ಜನ್ಮದಲ್ಲಿ ಕೊಂಡಯ್ಯ ಮ್ಯಾರೇಜ್ ಬ್ರೋಕರ್ ಆಗಿದ್ದನಂತೆ. ತುಂಬಾ ಸುಳ್ಳುಗಳನ್ನು ಹೇಳಿ ನೂರಾರು ಮದುವೆಗಳನ್ನು ಮಾಡಿಸಿದ್ದನಂತೆ. ಹಾಗಾಗಿ ಈ ಜನ್ಮದಲ್ಲಿ ಪೂರ್ತಿ ಅವನು ಕೌಟುಂಬಿಕ ಸಮಸ್ಯೆಗಳನ್ನು ಎದುರಿಸುತ್ತಲೇ ಇರುತ್ತಾನಂತೆ. ಇನ್ನೂ ಒಂದು ಮಜಾ ಅಂದ್ರೆ, ಮುಂದಿನ ಜನ್ಮದಲ್ಲಿ ಕೊಂಡಯ್ಯ ಮುಂಬಯಿಯ ಕಾಮಾಟಿಪುರದಲ್ಲಿ ಹುಟ್ಟಿ ಪಿಂಪ್ ಆಗ್ತಾನಂತೆ’. ರಾಘವರೆಡ್ಡಿಯ ಮಾತುಗಳನ್ನು ಮಧ್ಯದಲ್ಲಿಯೇ ತುಂಡರಿಸಿ ‘ನಿಮ್ಮ ಬಗ್ಗೆ ಕೇಳಲಿಲ್ಲವೆ’ ಎಂದಿದ್ದೆ. ‘ಅದೇ ಪಾಯಿಂಟ್‌ಗೆ ಬರ್ತಿದ್ದೀನಿರು ಮಾರಾಯಾ. ಹಿಂದಿನ ಜನ್ಮದಲ್ಲಿ ನಾನು ಪೊಲೀಸ್ ಆಫೀಸರ್ ಆಗಿದ್ನಂತೆ. ಸಿಕ್ಕಾಪಟ್ಟೆ ಜನರ ತಿಕಕ್ಕೆ ಲಾಠಿಯನ್ನು ತೂರಿಸಿದ್ದೆನಂತೆ. ಹಾಗಾಗಿಯೇ ಈ ಜನ್ಮದಲ್ಲಿ ಪಿಸ್ತೂಲಾ ವಕ್ಕರಿಸಿರೋದಂತೆ. ಏನು ಮಾಡಿದ್ರೂ ಈ ಜನ್ಮದಲ್ಲಿ ಇದರಿಂದ ಬಿಡುಗಡೆ ಸಿಗಲ್ವಂತೆ. ಮುಂದಿನ ಜನ್ಮದಲ್ಲಿ ನಾನು ತುಂಬಾ ಬಡ ರೈತನಾಗಿ ಹುಟ್ತೀನಂತೆ. ಅದಿರಲಿ, ಅಲ್ಲಿ ಏನು ಪೊಸಿಷನ್. ಮಳೆ, ಪ್ರವಾಹ ಎರಡೂ ಕಡಿಮೆಯಾಗಿವೆಯೆಂದು ನ್ಯೂಸ್. ನಾಳೆ, ನಾಡಿದ್ದರಲ್ಲಿ ಫ್ಲೈಟ್ ಸರ್ವೀಸ್ ರೀಸ್ಟಾರ್ಟ್ ಮಾಡ್ತಾರಂತೆ. ನೀನು ಮೊದಲ ಫ್ಲೈಟಿಗೆ ದಿಲ್ಲಿಗೆ ಬಂದು ಬಿಡು. ಹೆಂಗೂ ನೀನು ಪ್ಯಾಸೆಂಜರ್ ಸೀನಿಯಾರಿಟಿಯಲ್ಲಿ ಟಾಪಲ್ಲಿದ್ದೀಯ. ಕೆ.ಎಮ್. ನಯ್ಯಾರ್ ಕೂಡಾ ನಿನ್ನ ಜೊತೆಯಲ್ಲಿಯೇ ಬರಬಹುದು’ ಎಂದ ರಾಘವರೆಡ್ಡಿ.

ನಾನು ಒಂದು ಗ್ಲಾಸ್ ಬಿಸಿನೀರು ಕುಡಿದು ‘ಇವೊತ್ತು ನಾವು ಚಂಗನ್ಚೇರಿಯಲ್ಲಿ ಉಳಿದಿದ್ದೇವೆ. ಕೆ.ಎಮ್. ನಯ್ಯಾರರ ಆಪ್ತ ಸ್ನೇಹಿತರಂತೆ, ಜ್ಯುವೆಲರಿ ವ್ಯಾಪಾರಿ ಕರುಣಾಕರನ್ ಮೊದಲಿಯಾರ್ ಅಂತ. ಅವರ ಮನೆಯಲ್ಲಿಯೇ ಊಟ, ವಸತಿ ಎಲ್ಲಾ. ನಿಜಕ್ಕೂ ಕೇರಳದ ಜನ ಎಲ್ಲಿ ಹೋದರೂ ಅದ್ಭುತ ಆತಿಥ್ಯವನ್ನು ನೀಡುತ್ತಾರೆ. ಈ ಕರುಣಾಕರನ್ ಮೊದಲಿಯಾರ್ ಬಿಸಿನೆಸ್, ಕುಟುಂಬ, ಸಂಬಂಧ, ಗೆಳೆತನ ಪ್ರತಿಯೊಂದರಲ್ಲೂ ಅದೆಂಥ ಶಿಸ್ತನ್ನು ಮೈಂಟೇನ್ ಮಾಡಿದ್ದಾರೆ ಗೊತ್ತಾ? ಬಹಳ ತೀಕ್ಷ್ಣಮತಿಯ ಮನುಷ್ಯ. ನಯ್ಯಾರರನ್ನು ರಾಜಕೀಯಕ್ಕೆ ಎಂಟ್ರಿಯಾಗಲು ತುಂಬಾ ಒತ್ತಾಯಿಸುತ್ತಿದ್ದರು’ ಎಂದು ಹೇಳಿದ್ದೆ. ‘ಊಂ ನೋಡಿದ್ದೀನಿ ಒಂದು ಸಾರಿ, ಕೆ.ಎಮ್. ನಯ್ಯಾರರ ಮನೆಯಲ್ಲಿ. ನಯ್ಯಾರರದ್ದು ಒಂದಿಷ್ಟು